ವಿವೇಕವೂ ಇತ್ತು. ಹೀಗಾಗಿ ಅವರು ಆರಂಭದ ತಮ್ಮ ಸಾಂಪ್ರದಾಯಿಕ ಸಾಮಾಜಿಕ ಚಿಂತನೆಯನ್ನು ಬದಲಾಯಿಸಿಕೊಂಡು ಬೆಳೆಯುತ್ತ ಬಂದರು! ಅವರೇ ಒಮ್ಮೆ ಹೇಳಿಕೊಂಡಂತೆ ಅವರ ಜೀವನ ಸದಾ ವಿಕಸನಶೀಲವಾದುದು. ಈ ವಿಕಸನಶೀಲ ಗುಣದಿಂದಲೇ ಅವರು 'ತಪ್ಪು'ಗಳನ್ನು ಅರಿತು ಹೊಸ ಗಾಂಧಿಯಾಗಿ ಹೊರಹೊಮ್ಮಿದರು. ಬದಲಾವಣೆಯ ಬೆಳಕಾದರು. ಈ ಬದಲಾವಣೆಯನ್ನು ತಿಳಿಯದವರು ಗಾಂಧಿಯವರ ಆರಂಭಿಕ ಆಲೋಚನಾ ವಿಧಾನವನ್ನಷ್ಟೇ ಆಧರಿಸಿ ಆರೋಪಿಸುತ್ತಾ ಬಂದಿದ್ದಾರೆ. ಪ್ರತಿಗಾಮಿ ಮತ್ತು ಪ್ರಗತಿಗಾಮಿ ಕೆಲವರು ಗಾಂಧಿ ವಿರೋಧಕ್ಕಾಗಿ ಒಂದಾದ ವಿಪರ್ಯಾಸ ವಿಷಾದಕರ. ಸಾಮಾಜಿಕ ಬದಲಾವಣೆಗಾಗಿ ಬದಲಾಗುತ್ತ ಬಂದ ಗಾಂಧಿ ವಿಚಾರಗಳ ಸ್ಥಿತ್ಯಂತರವನ್ನು ಅವರಷ್ಟೇ ಪ್ರಾಮಾಣಿಕತೆಯಿಂದ ಪರಿಶೀಲಿಸಿದರೆ ಸತ್ಯ ತಿಳಿಯುತ್ತದೆ.

> 'ಬೇರೆ ಜಾತಿಗಳಿಗಿಂತ ತಾನು ಉತ್ತಮ ಎಂದು ಭಾವಿಸುವ ಬ್ರಾಹ್ಮಣನು ಬ್ರಾಹ್ಮಣನೇ ಅಲ್ಲ. ಬ್ರಾಹ್ಮಣನು ಪ್ರಥಮ ಎನ್ನಿಸಿದ್ದರೆ ಅದು ಆತನು ಸಲ್ಲಿಸಿದ ಸೇವೆಯಿಂದ ಮಾತ್ರ' ಎಂಬ ಅಭಿಪ್ರಾಯ ಗಾಂಧಿಯವರದಾಗಿತ್ತು.

ಗಾಂಧೀಜಿ ಆರಂಭದಿಂದಲೂ ಅಸ್ಪೃಶ್ಯತೆಯ ವಿರೋಧಿಯಾಗಿದ್ದರು. 'ಅಸ್ಪೃಶ್ಯತೆಯು ಹಿಂದೂ ಧರ್ಮದ ದುರ್ಮಾಂಸ' ಎಂದು ಕರೆದ ಅವರು 'ಅಸ್ಪೃಶ್ಯತೆ ನಾಶವಾದರೆ ಹಿಂದೂ ಧರ್ಮ ಜೀವಂತವಾಗಿರುತ್ತದೆ, ಅಸ್ಪೃಶ್ಯತೆ ಜೀವಂತವಾಗಿದ್ದರೆ ಹಿಂದೂ ಧರ್ಮನಾಶವಾಗುತ್ತದೆ' ಎಂದು ಸ್ಪಷ್ಟವಾಗಿ ಹೇಳಿದರು. ಅಪ್ಪಟ ಆಸ್ತಿಕರೂ ಶ್ರೀರಾಮ ಭಕ್ತರೂ ಆಗಿದ್ದ ಕಾರಣಕ್ಕೆ ಅಸ್ಪೃಶ್ಯರನ್ನು 'ಹರಿಜನ' ಎಂದು ಸಂಬೋಧಿಸಿದರು. ಹಾಗೆಂದ ಕೂಡಲೆ ಅಸ್ಪೃಶ್ಯರೆಲ್ಲ ಹರಿಭಕ್ತರಾಗಬೇಕು ಎಂದಲ್ಲ. ತಾವು ಗೌರವಿಸುವ ದೇವರ ಹೆಸರನ್ನು ಅಸ್ಪೃಶ್ಯರಿಗೆ ನೀಡುವ ಮೂಲಕ ಆ ಜನಾಂಗಕ್ಕೆ ಸಾಮಾಜಿಕ ಗೌರವ ಕೊಡುತ್ತಿದ್ದೇನೆಂಬ ಭಾವನೆ ಅವರಲ್ಲಿದೆ, ಅಷ್ಟೆ. ಆದ್ದರಿಂದ 'ಹರಿಜನ' ಎಂಬುದನ್ನು ಗೌರವ ಹಾಗೂ ಸಾಮಾಜಿಕ ಮನ್ನಣೆಯಾಚೆಗೆ ದೂರಾನ್ವಯ ಮಾಡುವುದು ಸರಿಯಲ್ಲ. ಜಾತಿಮೂಲ ಮಾನದಂಡವನ್ನು ವಿರೋಧಿಸಿದ ಬಸವಣ್ಣನವರು ಶ್ರಮಜೀವಿಗಳ ಕಾಯಕಕ್ಕೆ ಗೌರವ ಬರುವಂತೆ ಶಿವಭಕ್ತರೇ ನಿಜವಾದ ಕುಲಜರು ಎಂದು ಪ್ರತಿಪಾದಿಸಿದ್ದನ್ನು ಇದೇ ಸಂದರ್ಭದಲ್ಲಿ ಪೂರಕವಾಗಿ ನೋಡಬಹುದು.



ಅಸ್ಪೃಶ್ಯತೆಯ ಅಪ್ಪಟ ವಿರೋಧಿಯಾಗಿದ್ದ ಗಾಂಧೀಜಿಯವರು ಜಾತಿಪದ್ಧತಿ, ವರ್ಣಾಶ್ರಮ ಧರ್ಮ ಮತ್ತು ಅಸ್ಪೃಶ್ಯತೆಯ ನಡುವಿನ ಸಂಬಂಧಾಂತರಗಳನ್ನು ಅರಿಯುವಲ್ಲಿ ವಿಭಿನ್ನರಾಗಿ ಬಿಡುತ್ತಾರೆ. ಅಸ್ಪೃಶ್ಯತೆಯು ಜಾತಿ ಮತ್ತು ವರ್ಣ ವ್ಯವಸ್ಥೆಯ ಭಾಗ ಎಂದು ಅವರು ಅರ್ಥ ಮಾಡಿಕೊಂಡಂತೆ ಕಾಣುವುದಿಲ್ಲ. ಹೀಗಾಗಿ ಅವರ ಆರಂಭಿಕ ಅಭಿಪ್ರಾಯಗಳು ಜಾತಿ ಮತ್ತು ವರ್ಣ ವ್ಯವಸ್ಥೆಯ ಮೂಲ ರೂಪದಲ್ಲಿರುವ ಕೆಡುಕನ್ನು ಕಂಡುಕೊಳ್ಳುವುದಿಲ್ಲ. ಜಾತಿ ಮತ್ತು ವರ್ಣ ವ್ಯವಸ್ಥೆ ಕುರಿತ ಅವರ ವ್ಯಾಖ್ಯಾನವೇ ವಿಭಿನ್ನವಾದುದು. ಜಾತಿ ಪದ್ಧತಿಯು ಹಿಂದೂ ಧರ್ಮದ ಅಡಿಪಾಯವೆಂಬಂತೆ ತಿಳಿದ ಗಾಂಧೀಜಿ ಅವರ ಕೆಲವು ಅಭಿಪ್ರಾಯಗಳು ಹೀಗಿವೆ:

'ಜಾತಿ ವ್ಯವಸ್ಥೆಯು ಹಿಂದೂ ಧರ್ಮವನ್ನು ವಿಚ್ಛಿದ್ರಗೊಳ್ಳದಂತೆ ತಡೆದು ನಿಲ್ಲಿಸಿದೆ. ಆದರೆ ಇತರೆ ಎಲ್ಲ ವ್ಯವಸ್ಥೆಗಳ ಹಾಗೆ ಜಾತಿ ವ್ಯವಸ್ಥೆಯೂ ದುಷ್ಟ ಬೆಳವಣಿಗೆಗಳಿಂದ ವಿರೂಪಗೊಂಡಿದೆ